ಇ) ಈ ಸೇತುವೆಯನ್ನು ಪುನರ್ ನಿರ್ಮಾಣ ಮಾಡುವ ಅವಶ್ಯಕತೆ ಇದ್ದು, ಇದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) 1970 ರಲ್ಲಿ ನಿರ್ಮಿಸಲಾಗಿದೆ.

ಇ) ನೆರೆಪರಿಹಾರ ನಿಧಿಯ ಯೋಜನೆಯಡಿ ಈಗಾಗಲೇ ತುರ್ತು ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಅನುದಾನ ಲಭ್ಯತೆಯ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುವುದು.

490 ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗಾಗಲೇ ಕೊಳಚೆ ಪ್ರದೇಶಗಳೆಂದು ಘೋಷಿಸಲ್ಪಟ್ಟ ನಗರಗಳಲ್ಲಿ ಘೋಷಿಸಲು ಬಾಕಿ ಇರುವ ಕೊಳಚೆ ಪ್ರದೇಶಗಳೆಷ್ಟು;

ಆ) ಈ ಹಿಂದೆ ಯಾವ ವರ್ಷ ಘೋಷಿಸಲಾಗಿತ್ತು.

ಇ) ಯಾವ ಕಾರಣದಿಂದ ಘೋಷಣೆ ವಿಳಂಬವಾಗಿದೆ;

ಈ) ಘೋಷಿಸಲಾದ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಪರ ಯಾವ ಯಾವ ಕಾರ್ಯ ಕೈಗೊಳ್ಳಲಾಗಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಯವರು) :

ಅ) ವಿವಿಧ ನಗರ/ಪಟ್ಟಣಗಳಲ್ಲಿ 153 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಮಂಡಳಿ ಕಾಯ್ದೆಯಡಿ ಘೋಷಣೆಗೆ ಬಾಕಿ ಇರುತ್ತದೆ. ಘೋಷಣೆಗೆ ಬಾಕಿ ಇರುವ ಕೊಳಚೆ ಪ್ರದೇಶಗಳ ಸಂಖ್ಯೆಗಳ ವಿವರ ಈ ಕೆಳಕಂಡಂತಿವೆ:–

ಕ್ರ. ಸಂ.	ನಗರ/ಪಟ್ಟಣ	ಘೋಷಣೆಗೆ ಬಾಕಿ ಇರುವ ಕೊಳಚೆ ಪ್ರದೇಶಗಳ ಸಂಖ್ಯೆ
1	ಬೆಂಗಳೂರು	9
2	ಹೊಸಪೇಟೆ	26
3	ಶಿರಗುಪ್ಪ	5

4	ಬೆಳಗಾವಿ (ಅಥಣಿ ಹುಕ್ಕೇರಿ ರಾಮದುರ್ಗ ಗೋಕಾಕ ಚಿಕ್ಕೋಡಿ)	20 3 1 2 2 1
5	ಬಿಜಾಪುರ	1
6	ಚಿತ್ರದುರ್ಗ	7
7	ಚಾಮರಾಜನಗರ (ಗುಂಡ್ಲುಪೇಟೆ)	11
8	ದಾವಣಗೆರೆ	15
9	ಧಾರವಾಡ	4
10	ಕೊಪ್ಪಳ	2
11	ಮೈಸೂರು	1
12	ರಾಯಚೂರು	6
13	ಸಿಂಧನೂರು	6
14	ಶಿವಮೊಗ್ಗ	2
15	ಶಿರಾಳಕೊಪ್ಪ	2
16	ತುಮಕೂರು	9
17	ಶಿರಾ	8
18	ಚಿಕ್ಕನಾಯಕನಹಳ್ಳಿ	6
19	ಗುಬ್ಬಿ	2
20	ಉತ್ತರ ಕನ್ನಡ (ಸಿದ್ದಾಪುರ)	2
	ಒಟ್ಟು	**153**

ಆ) ಈ ಕೊಳಚೆ ಪ್ರದೇಶಗಳು ಘೋಷಣೆಗೆ ಬಾಕಿ ಇರುವುದರಿಂದ ವರ್ಷದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳನ್ನು ಸ್ಥಳ ತನಿಖಾ ವರದಿ, ಭೂ ದಾಖಲೆ, 2001 ರ ಮತದಾರರ ಪಟ್ಟಿ, ನಕ್ಷೆ, ಚಕ್ಕುಬಂದಿ ವಿವರಗಳಲ್ಲಿ ನ್ಯೂನತೆಗಳಿರುವ ಕಾರಣ ಹಾಗೂ ಸಂಬಂಧಪಟ್ಟ ನಗರಸಭೆ/ ಪುರಸಭೆಗಳು ಘೋಷಣೆಗೆ ಬೇಕಾದ ದಾಖಲೆಗಳನ್ನು ಒದಗಿಸದ ಕಾರಣ ಬಾಕಿ ಇರುತ್ತವೆ.

ಈ) ಘೋಷಿಸಲಾದ ಕೊಳಚೆ ಪ್ರದೇಶಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ರೂಪಿಸಿರುವ ಯೋಜನೆಗಳಡಿಯಲ್ಲಿ ವಸತಿ ಮತ್ತು ಮೂಲಭೂತ ಸೌಕರ್ಯಗಳನ್ನು ಅನುದಾನದ ಲಭ್ಯತೆ ಆಧರಿಸಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಪ್ರವಾಸೋದ್ಯಮ ಕೇಂದ್ರಗಳ ಗುರುತಿಸುವಿಕೆ :

807 ಶ್ರೀ ಖಾದರ್ ಯು.ಟಿ. : ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗುರುತಿಸಲಾದ ಪ್ರವಾಸೋದ್ಯಮ ಕೇಂದ್ರಗಳು ಯಾವುವು;

ಆ) ಅವುಗಳ ಅಭಿವೃದ್ಧಿಗಾಗಿ ಸರ್ಕಾರ ಅನುಷ್ಠಾನಗೊಳಿಸಿ ಮತ್ತು ಹಮ್ಮಿಕೊಂಡ ಕಾರ್ಯಕ್ರಮಗಳೇನು; (ವಿವರ ನೀಡುವುದು);

ಇ) ಇವುಗಳ ಅಭಿವೃದ್ಧಿಗಾಗಿ ಕಳೆದ 2 ವರ್ಷಗಳಿಂದ ಬಿಡುಗಡೆ ಮಾಡಿ, ವೆಚ್ಚ ಮಾಡಿರುವ ಅನುದಾನವೆಷ್ಟು;

ಈ) ಮಂಗಳೂರಿನ ಉಳ್ಳಾಲ ಮತ್ತು ಸೋಮೇಶ್ವರ ಸಮುದ್ರದ ತೀರ (ಬೀಚ್) ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳು ಯಾವುವು?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದೆ.

ಮಂಗಳೂರು, ಉಲ್ಲಾಳ, ಪಣಂಬೂರು, ಪಿಲಿಕುಳ, ತಣ್ಣೀರು ಬಾವಿ, ಸೋಮೇಶ್ವರ.